

# ಅಕ್ಷರ ತಪ್ಪಿಗೆ ಲಕ್ಷಾಂತರ ಕೋಟಿ ನಷ್ಟ!

ಕೆಲಸ ಬೇಗ ಮುಗಿಯಬೇಕು ಎಂಬ ಆತುರ ಅಥವಾ ನಿರ್ಲಕ್ಷ್ಯದಿಂದ ಸಣ್ಣಪುಟ್ಟ ತಪ್ಪುಗಳು ಆಗುತ್ತಿರುತ್ತವೆ. ಆದರೆ ಅವನ್ನು ಸಣ್ಣ ತಪ್ಪುಗಳೆಂದು ಅಲಕ್ಷಿಸಿದರೆ ಒಮ್ಮೊಮ್ಮೆ ಪರಿಣಾಮ ಭೀಕರವಾಗಿರಬಹುದು. ಕೋಟ್ಯಂತರ ರೂಪಾಯಿ ನಷ್ಟವಾಗಬಹುದು. ಅಂತಹ ಕೆಲವು ಉದಾಹರಣೆಗಳು ಇಲ್ಲಿವೆ.

■ ಪೃಥ್ವಿರಾಜ್

### ಅಂಕಿಗಳು ಅದಲುಬದಲಾದಾಗ

ಜಪಾನ್‌ನ ಮಿಜುಹೌ ಸಂಸ್ಥೆ 2005ರಲ್ಲಿ ಮಾಡಿದ ಪುಟ್ಟ ತಪ್ಪಿನಿಂದಾಗಿ 225 ಮಿಲಿಯನ್ ಡಾಲರ್ ಹಣ ನಷ್ಟ ಅನುಭವಿಸಬೇಕಾಯಿತು! ಸ್ಟಾಕ್ ಮಾರ್ಕೆಟ್ ಟ್ರೇಡಿಂಗ್ ಲಿಸ್ಟ್‌ನಲ್ಲಿ ಈ ಸಂಸ್ಥೆ, ಒಂದು ಷೇರು 6,10,000 ಯೆನ್‌ಗಳು ಎಂದು ಬರೆಯಬೇಕಾದ ಕಡೆ ‘6,10,000 ಷೇರುಗಳು ಒಂದು ಯೆನ್‌ಗೆ’ ಎಂದು ಬರೆದಿತ್ತು. ಇದರಿಂದ ಷೇರುಗಳ ಖರೀದಿ ಹೆಚ್ಚಾಯಿತು. ತಪ್ಪು ಅರಿತುಕೊಂಡ ಸಂಸ್ಥೆ ಷೇರುಗಳ ಖರೀದಿ ರದ್ದುಗೊಳಿಸಲು ಪ್ರಯತ್ನಿಸಿತು, ಆದರೆ ‘ಟೋಕಿಯೊ ಎಕ್ಸ್‌ಚೇಂಜ್’ ಖರೀದಿ ಪ್ರಕ್ರಿಯೆ ರದ್ದುಗೊಳಿಸಲು ನಿರಾಕರಿಸಿತು. ಇದರಿಂದ ಸಂಸ್ಥೆಗೆ ಭಾರಿ ನಷ್ಟವಾಯಿತು.

### ಒಂದರ ಬದಲಾಗಿ ಮತ್ತೊಂದು

‘ಟೇಲರ್ ಅಂಡ್ ಸನ್ಸ್’ ಎಂಬ ಇಂಜಿನಿಯರಿಂಗ್ ವರ್ಕಿಂಗ್ ಸಂಸ್ಥೆ ವೇಲ್ಸ್‌ನಲ್ಲಿ ಜನಪ್ರಿಯ. ಆದರೆ, ‘ಟೇಲರ್ ಅಂಡ್ ಸನ್’ ಎಂಬ ಹೆಸರಿನ ಮತ್ತೊಂದು ಸಂಸ್ಥೆಯೂ ಇತ್ತು. ಈ ಎರಡೂ ಸಂಸ್ಥೆಗಳ ಕಾರ್ಯಚಟುವಟಿಕೆಗಳು ಬೇರೆ ಬೇರೆಯಾಗಿದ್ದರೂ ಸಣ್ಣ ತಪ್ಪಿನಿಂದ ಮತ್ತೊಂದು ಸಂಸ್ಥೆ (ಟೇಲರ್ ಅಂಡ್ ಸನ್ಸ್) ಬಾಗಿಲು ಮುಚ್ಚಿಕೊಳ್ಳಬೇಕಾಯಿತು.

‘ಕಂಪನೀಸ್ ಹೌಸ್’ ಎಂಬ ಸಂಸ್ಥೆ ಯುಕೆಯಲ್ಲಿರುವ ವ್ಯಾಪಾರ–ವಹಿವಾಟುಗಳನ್ನು ಪರಿಶೀಲಿಸುತ್ತಿರುತ್ತದೆ. ಯಾವ ಸಂಸ್ಥೆಗಳು ಕಾರ್ಯ ನಡೆಸುತ್ತಿವೆ. ಯಾವ ಸಂಸ್ಥೆಯ ಕಾರ್ಯಚಟುವಟಿಕೆ ಸ್ಥಗಿತಗೊಂಡಿದೆ ಎಂಬ ವರದಿಯನ್ನು ಆಗಾಗ್ಗೆ ರೂಪಿಸುತ್ತಿರುತ್ತದೆ. 2009ರಲ್ಲಿ ‘ಟೇಲರ್ ಅಂಡ್ ಸನ್’ ಸಂಸ್ಥೆ ಸ್ಥಗಿತಗೊಂಡು ಬಾಗಿಲು ಮುಚ್ಚಿತ್ತು, ಆದರೆ ‘ಟೇಲರ್ ಅಂಡ್ ಸನ್ಸ್’ ಕಾರ್ಯಚಟುವಟಿಕೆ ನಿಲ್ಲಿಸಿದೆ ಎಂದು ‘ಕಂಪನೀಸ್ ಹೌಸ್’ ತನ್ನ ವರದಿಯಲ್ಲಿ ಬರೆದಿತ್ತು. ಇದರಿಂದ ಗ್ರಾಹಕರ ಸಂಖ್ಯೆ ಇಳಿಮುಖವಾಗಿ ‘ಟೇಲರ್ ಅಂಡ್ ಸನ್ಸ್’ ವಿಪರೀತ ನಷ್ಟ ಅನುಭವಿಸಿತು. ಈ ತಪ್ಪಿನಿಂದಾಗಿ 2014ರಲ್ಲಿ ಸುಮಾರು 120 ವರ್ಷ ಇತಿಹಾಸ ಹೊಂದಿದ್ದ ಈ ಸಂಸ್ಥೆ ನಿಜವಾಗಿಯೂ ಬಾಗಿಲು ಮುಚ್ಚಬೇಕಾಯಿತು.

### ಅಲ್ಪವಿರಾಮದ ನಷ್ಟ (,)

ಅಮೆರಿಕ ಸರ್ಕಾರ ಆಮದು ಮಾಡಿಕೊಳ್ಳುವ ವಸ್ತು, ಉಪಕರಣಗಳ ಮೇಲೆ ವಿಧಿಸುವ ಟ್ಯಾರಿಫ್ ಟ್ಯಾಕ್ಸ್ ಕಾಯ್ದೆಗೆ 1872ರಲ್ಲಿ ತಿದ್ದುಪಡಿ ಮಾಡಿತು. ಇದರ ಭಾಗವಾಗಿ ಆಮದು ಮಾಡಿಕೊಳ್ಳುವ ಹಣ್ಣು–ಸಸಿಗಳಲ್ಲಿ ಯಾವುದಕ್ಕೆ ತೆರಿಗೆ ಅನ್ವಯವಾಗುತ್ತದೆ, ಯಾವುದಕ್ಕೆ ಆಗುವುದಿಲ್ಲ ಎಂಬ ವರದಿ ಸಿದ್ಧಪಡಿಸಿತು. ಈ ವರದಿಯಲ್ಲಿ ತೆರಿಗೆ ಅನ್ವಯವಾಗದ ‘ಹಣ್ಣಿನ ಸಸಿಗಳು' ಎಂದು ಬರೆಯಬೇಕಾದ ಕಡೆ 'ಹಣ್ಣುಗಳು, ಸಸಿಗಳು’ ಎಂದು ಬರೆಯಲಾಗಿತ್ತು. ಈ ಸಣ್ಣ ತಪ್ಪಿನ ಲಾಭ ಪಡೆದ ವರ್ತಕರು ಯಾವುದೇ ತೆರಿಗೆ ಪಾವತಿಸದೆ ಹಣ್ಣುಗಳು ಹಾಗೂ ಸಸಿಗಳನ್ನು ಆಮದು ಮಾಡಿಕೊಂಡರು. ಸರ್ಕಾರಕ್ಕೆ ಈ ತಪ್ಪಿನ ಅರಿವಾಗುವಷ್ಟರಲ್ಲಿ ಸುಮಾರು 2 ಮಿಲಿಯನ್ ಡಾಲರ್‌ನಷ್ಟು ಹಣ ನಷ್ಟವಾಯಿತು.

### ರಾಕೆಟ್ ವೈಫಲ್ಯಕ್ಕೆ ಚಿಹ್ನೆ ಕಾರಣ

ಶುಕ್ರಗ್ರಹ ಅಧ್ಯಯನಕ್ಕಾಗಿ ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ನಾಸಾ) 1962ರಲ್ಲಿ ‘ಮೆರಿನ್–1’ ಎಂಬ ರಾಕೆಟ್ ಉಡಾವಣೆ ಮಾಡಿತು. ಈ ರಾಕೆಟ್ ನಭಕ್ಕೆ ಜಿಗಿದ ಐದೇ ನಿಮಿಷದಲ್ಲಿ ಸ್ಫೋಟಗೊಂಡಿತು. ಕಾರಣ ಹುಡುಕಿದಾಗ, ಕಂಪ್ಯೂಟರ್ ಕೋಡಿಂಗ್‌ನಲ್ಲಿನ ಅಕ್ಷರ ದೋಷವೆಂಬುದು ತಿಳಿಯಿತು. ಈ ಪ್ರಯೋಗಕ್ಕೆ ಸಂಬಂಧಿಸಿದ ಕೋಡಿಂಗ್‌ನಲ್ಲಿ ‘R–’ ಎಂದು ಬರೆಯಬೇಕಾದ ಕಡೆ ಕೇವಲ R ಎಂದು ಬರೆಯಲಾಗಿತ್ತು. ಬರೆಯುವಾಗ ‘R–’ ಎಂದು ಬರೆದು ನಂತರ ಅದನ್ನು ಕಂಪ್ಯೂಟರ್‌ನಲ್ಲಿ ಕೋಡಿಂಗ್ ಮಾಡುವಾಗ R ಪಕ್ಕದಲ್ಲಿ ಬರೆಯಬೇಕಾಗಿದ್ದ (–) ಹೈಫನ್ ಬಿಡಲಾಗಿತ್ತು. ಹೀಗಾಗಿ ರಾಕೆಟ್ ಪ್ರಯೋಗ ವಿಫಲವಾಯಿತು. ಇದರಿಂದ ಅಮೆರಿಕಕ್ಕೆ ಸುಮಾರು 80 ಮಿಲಿಯನ್ ಡಾಲರ್ ಹಣ ನಷ್ಟವಾಯಿತು.

### 617 ಬಿಲಿಯನ್ ಸಂಪತ್ತು ಆವಿ!

‘ಟೋಕಿಯೊ’ ಎಕ್ಸ್‌ಚೇಂಜ್ ಸಂಸ್ಥೆಯಲ್ಲಿ ಒಬ್ಬ ಟ್ರೇಡರ್ ಒಂದು ಬಟನ್ ಒತ್ತಬೇಕಾದ ಕಡೆ ತಪ್ಪಾಗಿ ಷೇರು ಖರೀದಿ ರದ್ದು ಮಾಡುವ ಬಟನ್ ಒತ್ತಿದ ಪರಿಣಾಮ, ಟ್ರೇಡಿಂಗ್‌ನಲ್ಲಿ ಸುಮಾರು 42 ವಹಿವಾಟುಗಳು ರದ್ದಾದವು. ಇದಿರಂದ ಸುಮಾರು 617 ಬಿಲಿಯನ್ ಸಂಪತ್ತು ನಷ್ಟವಾಯಿತು. ಈ ಘಟನೆ 2014ರಲ್ಲಿ ನಡೆದಿತ್ತು.

ಪ್ರತಿಕ್ರಿಯಿಸಿ: feedback@sudha.co.in